ಹಿಂದಿನ ಸಂಜೆ ಕಾಫಿ ಬಾರಿನಲ್ಲಿ ಕೇಳಿದ ಸಂಗತಿ ಅವನನ್ನು ಹುಚ್ಚಾಗಿಸಿತ್ತು. ವಿಧವಾ ಹೆಂಗಸು ಪಡುವ ಕಷ್ಟ ತನ್ನ ತಾಯಿಯ ಬಾಳ್ವೆಯಿಂದ ಅವನಿಗೆ ಗೊತ್ತಿತ್ತು. ಪದ್ದಣ್ಣ ತನ್ನ ಮಗಳು ವಿಧವೆಯಾದವಳೆಂದನೇ ಹೊರತು ಸತ್ತ ಗಂಡನಿಂದ ಅವಳಿಗೊಂದು ಮಗು ಇದೆ ಎಂದು ಯಾಕೆ ಮುಚ್ಚಿಟ್ಟ? ತಾನು ಉದಾರಿಯಂತೆ! ಇದು ಗೊತ್ತಿದ್ದರೆ ಅವರು ಹೇಳಿಬಿಡುತ್ತಿದ್ದರಂತೆ. ಈ ಮುದುಕ ಆಗಲೇ ಯಾಕೆ ನನ್ನ ಹುಡುಕಿ ಹೇಳಲಿಲ್ಲ. ಗೆಳೆಯನಿಗೆ ಭಾಷೆ ಕೊಟ್ಟಿದ್ದನಂತೆ. ಛೇ! ಒಂದು ನೌಕರಿಗಾಗಿ ಇದೆಂತಹ ಹಳವಂಡದಲ್ಲಿ ಬಿದ್ದೆ ಎಂದು ಅವನಿಗೆ ಹಳಹಳಿಕೆಯಾಗಿತ್ತು.

★★★

ಸುಮತಿಗೆ ಎಲ್ಲವೂ ಅರ್ಥವಾಗಿಹೋಗಿತ್ತು. ಅವಳು ಆಗಲೆ ಅಪ್ಪನಿಗೆ ಹೇಳಿದ್ದಳು: 'ಎಲ್ಲವೂ ಹೇಳಿಬಿಡೋಣ; ಯಾವುದೂ ಮುಚ್ಚಿಡೋದು ಬೇಡ ಅಂತ.' ಆದರೆ ತಂದೆ, 'ನಿನಗೆ ಗೊತ್ತಾಗೊಲ್ಲ ಸುಮ್ಮನಿರು' ಎಂದು ಬಾಯಿ ಮುಚ್ಚಿಸಿದರು. ಸುಮತಿಗೆ ಈಗ ಇನ್ನೊಂದು ಪರಿಹಾರವಾಗಬೇಕಿತ್ತು: ಇವರಿಗೆ ನನ್ನ ಮೊದಲ ಗಂಡ ಸತ್ತಿಲ್ಲ; ನನ್ನ ಬಿಟ್ಟು ಇನ್ನೊಬ್ಬಾಕೆಯನ್ನು ಕಟ್ಟಿಕೊಂಡಿದ್ದಾನೆ ಎಂದು ಗೊತ್ತಿರಬಹುದಾ? ಇಷ್ಟೆಲ್ಲ ತಿಳಿದಿದೆ ಎಂದಮೇಲೆ ಇದೂ ಗೊತ್ತಿರಬೇಕು. ಅವಳಿಗೆ ಕ್ರಮೇಣ ಒಂದು ವಿಷಯ ಸ್ಪಷ್ಟವಾಯಿತು: ಅವರ ತಾಯಿ ವಿಧವೆಯಾಗಿದ್ದು; ಸಾಕಷ್ಟು ಕಷ್ಟ ನಷ್ಟಗಳನ್ನು ಅನುಭವಿಸಿದವರು. ಇದನ್ನು ಇವರು ನನ್ನ ತಂದೆ ಬಳಿ ಹೇಳಿಕೊಂಡಿದ್ದರಂತೆ. ತಂದೆಯವರು ನನ್ನ ಗಂಡ ಬೇರೆಯವಳನ್ನು ಮದುವೆಯಾದ ಅನ್ನುವುದಕ್ಕಿಂತ ಸತ್ತುಹೋದ ಎಂದು ಇವರ ಬಳಿ ಸುಳ್ಳು ಹೇಳಿದ್ದಾರೆ. ಇದು ಇವರ ಕೋಪಕ್ಕೆ ಕಾರಣ. ಅಲ್ಲದೆ ಮಗುವಿನ ವಿಷಯ ನಾನೂ ಮುಚ್ಚಿಡಬಾರದಿತ್ತೇನೊ!

ಅನಂತರದ ದಿನಗಳು ಇಬ್ಬರಿಗೂ ದುರ್ಭರವೆನಿಸಿದವು.

ಮಗು ತಾಯಿಯಲ್ಲಿ ಮಾತ್ರ ಪ್ರೀತಿ ನೆಚ್ಚುವಂತಾಯಿತು.

ಒಮ್ಮೊಮ್ಮೆ ಶಿವಶಂಕರನೂ ಎದೆಗೊತ್ತಿಕೊಂಡು ಆಡಿಸುತ್ತಿದ್ದುದ್ದುಂಟು. ಆಗ ಅದು ಅತ್ತು ರಂಪ ಮಾಡಿ ಇವಳು ಎತ್ತಿಕೊಳ್ಳಲು ಬಂದರೆ ಇವನು ಸುಮ್ಮನೆ ಕೊಡುತ್ತಿರಲಿಲ್ಲ. ಕೊಂಕು, ಕುಹಕ ಧಾರಾಳವಾಗಿ ವೆಚ್ಚ ಮಾಡಿಯೇ ಕೊಡುತ್ತಿದ್ದ. ಒಂದು ಸಲ 'ಇದಾದರೂ ನನಗೆ ಹುಟ್ಟಿದ್ದು ತಾನೆ?' ಎಂದು ಕೇಳಿದ್ದ. ಇದು ಅವಳನ್ನು ತುಂಬಾ ಘಾಸಿಗೊಳಿಸಿತ್ತು.

ಒಂದು ಬೆಳಿಗ್ಗೆ ಪ್ರವಾಸಿ ಬ್ಯಾಗಿನಲ್ಲಿ ಇವನು ಬಟ್ಟೆಬರೆ ಇಟ್ಟುಕೊಳ್ಳುತ್ತಿದ್ದುದು ನೋಡಿ ಅವಳು 'ಎಲ್ಲಿಗೆ?' ಎಂದಳು. 'ಸಾಯೋಕೆ' ಎಂದು ಬಿರುಸಾಗಿ ನುಡಿದು ಹೊರಟುಹೋದ. ಒಂದು ವಾರ ಬಿಟ್ಟು ವಾಪಸ್ಸಾಗಿದ್ದ. ಆ ದಿನಗಳಲ್ಲಿ ಸುಮತಿ ತೀರಾ ಇಳಿದುಹೋದಳು. ವಿಷ್ಣುಕಾಂತ ಮಾತ್ರ ಇವ್ಯಾವೂ ತನ್ನ ಪ್ರಪಂಚಕ್ಕೆ ಸೇರಿದ್ದಲ್ಲವೆಂಬಂತೆ ಬಾಲಲೀಲೆಗಳಲ್ಲಿ ಮುಳುಗಿರುತ್ತಿದ್ದ.

ಅವರ ನಡುವೆ ಮಾತು ಸತ್ತುಹೋಗಿ ವರ್ಷಗಳಾದಂತೆ ಭಾಸವಾಗುತ್ತಿತ್ತು. ಶಿವಶಂಕರ ತನ್ನ ಓದು–ಬರಹ, ಕಾಲೇಜು, ಕಾಫಿ ಬಾರಿನ ಸ್ನೇಹಿತರು ಎಂದು ಒಂದು ದಾರಿಯಲ್ಲಿ ನಡೆದರೆ; ಸುಮತಿ ಮಗನ ಮೇಲೆ 'ಪ್ರಾಣ' ನೆಟ್ಟು ಜೀವಿಸುತ್ತಿದ್ದಳು.

ಶಿವಶಂಕರನ ಜೀವನದಲ್ಲಿ ಒಂದು ರೀತಿ–ನೀತಿ ಎಂಬುದು ನಾಸ್ತಿಯಾಯಿತು. ಒಂದು ಮಳೆಗಾಲದ ರಾತ್ರಿ ನಿದ್ದೆ ಮಾತ್ರೆಗಳ ಡಬ್ಬಿಯೊಂದನ್ನು ಸಂಗ್ರಹಿಸಿ ತಂದ...

ಅಲ್ಲಿಗೆ ಕಥೆ ನಿಂತುಹೋಗಿತ್ತು. ನಿದ್ದೆಯೂ ಎಳೆಯುತ್ತಿತ್ತು. ಈ ಕಂತೆಯನ್ನು ಬದಿಗಿರಿಸಿ ಹಾಗೆಯೆ ರಗ್ಗು ಎಳೆದುಕೊಂಡೆ.

ಮಂದಾಕಿನಿ ಮಾರನೆಯ ದಿನ ಬಂದಿರಲಿಲ್ಲ. ಎರಡನೆಯ ದಿನ ಮಧ್ಯಾಹ್ನ ನಾವಿಬ್ಬರೇ ಗ್ರಂಥಾಲಯದಲ್ಲಿ ಉಳಿದಿದ್ದೆವು. ಕೇಳಿದೆ: 'ನೀವು ಬೇಸರ ಮಾಡಿಕೊಳ್ಳದಿದ್ದರೆ ಒಂದು ಮಾತು! ನಿಮ್ಮ